# ವನ–ವಾರ್–ತೆಗಳು!



ಈಶ್ವರ್

■ ನಾರಾಯಣ ರಾಯಚೂರ್

**ಪ್ರಾಣಿಲೋಕ ಚಾನಲ್‌ಗೆ ಸ್ವಾಗತ. ಇಂದಿನ ಆಗ್ರ ಅರಣ್ಯ ವಾರ್ತೆಗಳು.**

ಮುಖ್ಯಾಂಶಗಳು:

- ಸೀಳು ನಾಯಿಗಳ ಆತ್ಮಗೌರವಕ್ಕೆ ಧಕ್ಕೆ; ಉಗ್ರ ಹೋರಾಟಕ್ಕೆ ಸಿದ್ಧತೆ.
- ನಾಯಿಗಳ ಒಕ್ಕೂಟದ ಅಧ್ಯಕ್ಷ ಶ್ವಾನೇಂದ್ರ ಸಿಡಿ–ಮಿಡಿ!
- ಎರಡು ಹೆಡೆ ಹಾವುಗಳ ಸಂಘದಿಂದಲೂ ಶೀಘ್ರ ಪ್ರತಿಭಟನೆ; ಸಂಘದ ಕಾರ್ಯದರ್ಶಿ ಜೋಡಿ–ನಾಗಾ ಭುಸು–ಭುಸು.
- ಚಾರ್ಲಿ 777 ಚಿತ್ರಕ್ಕೆ ತೆರಿಗೆ ವಿನಾಯತಿ ನೀಡಲು ಆಗ್ರಹ.

ವಾರ್ತೆಗಳ ವಿವರ

‘ಮನುಷ್ಯರು ತಮ್ಮ ‘ಪಕ್ಷ ರಾಜಕೀಯ ಕೆಸರಾಟದಲ್ಲಿ’ ನಮ್ಮಂತಹ ಮುಗ್ಧ, ನಿರುಪದ್ರವಿಗಳನ್ನು ಎಳೆದು ತಂದು, ಅಸಭ್ಯ ರೀತಿಯಲ್ಲಿ ಹೋಲಿಸಿ, ನಮ್ಮ ಆತ್ಮಗೌರವಕ್ಕೆ ಧಕ್ಕೆ ತರುವಂತಹ ಹೇಳಿಕೆಗಳನ್ನು ನೀಡುತ್ತಿದ್ದು, ಮಾಧ್ಯಮ, ಸಾಮಾಜಿಕ ಜಾಲತಾಣಗಳಲ್ಲಿ ನಮ್ಮ ತೇಜೋವಧೆ ಆಗುತ್ತಿರುವುದರಿಂದ ಕೂಡಲೇ ತಮ್ಮ ಹೇಳಿಕೆಗಳನ್ನು ಬೇಷರತ್ ಆಗಿ ವಾಪಸ್ ಪಡೆದು ಕ್ಷಮಾಪಣೆ ಕೇಳದಿದ್ದರೆ ಉಗ್ರ ಹೋರಾಟ ಪ್ರಾರಂಭ ಮಾಡುವುದಾಗಿ ಒಕ್ಕೂಟದ ಅಧ್ಯಕ್ಷ ಶ್ವಾನೇಂದ್ರ ಎಚ್ಚರಿಕೆ ನೀಡಿದ್ದಾರೆ...

‘ಬನ್ನಿ ಈ ಬಗ್ಗೆ ಮಾಹಿತಿ ನೀಡಲು ನಮ್ಮ ಪ್ರತಿನಿಧಿ, ಗುಳ್ಳೆನರಿ ಅವರು ನಮ್ಮ ಸಂಪರ್ಕದಲ್ಲಿದ್ದಾರೆ: ‘ಹಲೋ... ಹಲೋ... ಅವರು ಸಂಪರ್ಕಕ್ಕೆ ಸಿಗ್ತಾಯಿಲ್ಲ, ಮುಂದೆ ಹೋಗೋಣ.’

‘ಇದೇ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಆತ್ಮಗೌರವಕ್ಕೂ ಧಕ್ಕೆ ಆಗಿದೆ; ಸೀಳುನಾಯಿಗೆ ಹೋಲಿಸಿದ ರಾಜಕಾರಣಿಯ ಮಾತುಗಳಿಗೆ ಪ್ರತಿಯಾಗಿ ಅವರನ್ನು ‘ಎರಡು ತಲೆಯ ಹಾವು’ ಎಂದು ನಮ್ಮೊಂದಿಗೆ ಹೋಲಿಸಿ, ನಮ್ಮ ಬಗ್ಗೆ ಅವಹೇಳನಕಾರಿಯಾಗಿ ಹೇಳಿರುವುದೂ ಮಾಧ್ಯಮಗಳಿಂದ ನಮ್ಮ ಗಮನಕ್ಕೆ ಬಂದಿದೆ. ಆದ್ದರಿಂದ ಸಂಬಂಧಪಟ್ಟವರು ಕೂಡಲೇ ಆ ಮಾತುಗಳನ್ನು ಹಿಂದೆ ಪಡೆಯಬೇಕು ಮತ್ತು ಕ್ಷಮೆ ಕೇಳಬೇಕು. ಒಂದು ವಾರದೊಳಗೆ ಕ್ಷಮಾಪಣೆ ಕೇಳದಿದ್ದರೆ ನಾವೂ ನಗರಕ್ಕೆ ಬಂದು ನಮ್ಮ ಶಕ್ತಿ ಏನೆಂದು ಪ್ರದರ್ಶಿಸುತ್ತೇವೆ.’

ಈ ಬಗ್ಗೆ ಎರಡು ಹೆಡೆ ಹಾವುಗಳ ಸಂಘದ, ದಂಡಕಾರಣ್ಯದ ಕಾರ್ಯದರ್ಶಿ ಜೋಡಿನಾಗ ಅವರು ದೂರವಾಣಿಯಲ್ಲಿ ಜಾಯಿನ್ ಆಗ್ತಾಯಿದಾರೆ. ‘ನಮಸ್ಕಾರ ಜೋಡಿನಾಗ ಅವರೇ...’

‘ನಮಸ್ಕಾರ’

‘ಹೇಳಿ, ನಿಮ್ಮ ಸಮಸ್ಯೆ ಏನೂ ಅಂತ...’

‘ಈ ಮಾನವರು ನಮ್ಮಂತಹ ಪ್ರಾಣಿವರ್ಗದ ಬಗ್ಗೆ ಭಾಳ ಹಗುರವಾಗಿ ಮಾತನಾಡೋದು ಈಗೀಗ ಜಾಸ್ತಿ ಆಗ್ತಾಯಿದೆ. ತಮಗೊಬ್ಬರಿಗೇ ತಲೆ ಇದೆ ಅಂತ ಅನ್ಕೊಂಡಹಂಗಿದೆ ಅವರು! ನಮಗೆ ಎರಡು ತಲೆ ಇವೆ ಅನ್ನೋದನ್ನ ಮರೀಬಾರದವ್ರು; ನಮ್ಮನ್ನ ನಮ್ಮಂತೆ ಇರೋದಕ್ಕೆ ಬಿಡಿ, ನಮ್ಮ ತಂಟೆಗೆ ಬರಬೇಡಿ. ಇಷ್ಟೇ ನಾವು ಕೇಳಿಕೊಳ್ಳೋದು. ಪ್ರಾಣಿ ದಯಾ ಸಂಘದವರಿಗೂ ನಾವು ಈ ವಿಚಾರವಾಗಿ ಹಿಂದೇನೂ ಮಾತಾಡಿದೀವಿ, ಈಗಲೂ ಮಾತಾಡ್ತೀವಿ, ಇನ್ನು ಮುಂದೇನೂ ಮಾತಾಡ್ತೀವಿ.’

ಸಂಪರ್ಕ ಕಟ್ ಆಗುತ್ತೆ.

‘ಹಲೊ... ಹಲೊ... ನೆಟ್ವರ್ಕ್ ಸಮಸ್ಯೆ ಇದೆ ಅಂತ ಕಾಣುತ್ತೆ. ಮತ್ತೆ ಅವರನ್ನ ಮಾತಾಡಿಸೋಣ. ಈಗ ನಮ್ಮ ಪ್ರತಿನಿಧಿ ಗುಳ್ಳೆನರಿ... ಹೇಳಿ ಗುಳ್ಳೆನರಿ, ಈ ಸೀಳು–ನಾಯಿಗಳ ಹೋರಾಟ ಏನು ಅಂತ.’

‘ನಮಸ್ಕಾರ ಕರಡೀಶ್. ಈಗಾಗಲೇ ಮಾಧ್ಯಮದಲ್ಲಿ ಬಂದಿರೋಹಾಗೆ, ಸೀಳುನಾಯಿ ತರಹ ನನ್ನ ಮೈಮೇಲೆ ಬೀಳ್ತಾರೆ ಅಂತ ಹೇಳಲಾಗಿರೋ ವಿಚಾರಕ್ಕೆ ಸಂಬಂಧಪಟ್ಟಂತೆ ಸೀಳುನಾಯಿಗಳು ತುಂಬಾ ಬೇಜಾರು ಮಾಡಿಕೊಂಡಿವೆ. ಅವು ಸದ್ಯದಲ್ಲೇ ನಗರಕ್ಕೆ ಬಂದು ದೊಡ್ಡ ಪ್ರಮಾಣದ ಪ್ರತಿಭಟನೆಗೆ ಸಜ್ಜಾಗ್ತಾಯಿವೆ. ಹಾಗೆಯೇ ಒಕ್ಕೂಟದ ಅಧ್ಯಕ್ಷ ಶ್ವಾನೇಂದ್ರ ನಾಯಿಗಳ ಸ್ವಾಮಿನಿಷ್ಠೆ, ಪ್ರೀತಿ ಹಾಗೂ ಮನುಷ್ಯರೊಂದಿಗಿನ ಬಾಂಧವ್ಯವನ್ನ ಪರಿಣಾಮಕಾರಿಯಾಗಿ ಚಿತ್ರಿಸಿರುವ ‘ಚಾರ್ಲಿ 777’ ಚಿತ್ರವನ್ನ ಮೆಚ್ಚಿಕೊಂಡಿದ್ದೂ ಉಂಟು, ಕರಡೀಶ್.’

‘ಧನ್ಯವಾದ ಗುಳ್ಳೆನರಿ.’

‘ನಗರದಲ್ಲಿ ಬಿಡುಗಡೆಯಾಗಿ ಭರ್ಜರಿಯಾಗಿ ಓಡುತ್ತಿರುವ ಚಾರ್ಲಿ 777 ಸಿನಿಮಾಕ್ಕೆ ಕಾಡಿನ ಪ್ರಾಣಿಗಳೂ ಅಪಾರ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದು, ಈ ಚಿತ್ರಕ್ಕೂ ಸಂಪೂರ್ಣ ತೆರಿಗೆ ವಿನಾಯತಿ ನೀಡಿ ಪ್ರಾಣಿಪ್ರೇಮ ಹೆಚ್ಚಳವಾಗಿ, ಮನುಷ್ಯ ಮತ್ತು ಪ್ರಾಣಿಗಳ ಸೌಹಾರ್ದಯುತ ಜೀವನಕ್ಕೆ ಒತ್ತು ನೀಡಬೇಕು ಮತ್ತು ಇಂತಹ ಚಿತ್ರಗಳು ಹೆಚ್ಚಿನ ಸಂಖ್ಯೆಯಲ್ಲಿ ನಿರ್ಮಾಣಗೊಳ್ಳಬೇಕು, ಅವುಗಳಿಗೆ ಸಹಾಯಧನ ಹೆಚ್ಚಿಗೆ ನೀಡಬೇಕು ಎಂದು ವನರಾಜ ಸಿಂಹ ಆಗ್ರಹ ಮಾಡಿದೆ. ಚಾರ್ಲಿ ಅಭಿನಯ ಮತ್ತು ಅದು ಗಳಿಸಿರೋ ಜನಪ್ರಿಯತೆ ನೋಡಿದ್ರೆ ‘ಚಾರ್ಲಿ...’ ಚಾಪ್ಲಿನ್‌ಗಿಂತಲೂ ಫೇಮಸ್ ಆಗಬಹುದು!’ ಎಂದು ಪ್ರಶಂಸೆಯ ಗರ್ಜನೆ ಮಾಡಿದೆ.

ಕೊನೆಯದಾಗಿ ಹವಾಮಾನ ವರದಿ. ಕಾಡಿನಾದ್ಯಂತ ಮುಂಬರುವ ಇಪ್ಪತ್ನಾಲ್ಕು ಗಂಟೆಗಳಲ್ಲಿ ಪ್ರತಿ ಎಂಟು ಗಂಟೆಗೊಮ್ಮೆ ಕಾಲ ಬದಲಾವಣೆಯಾಗಲಿದ್ದು, ಮೊದಲಿನ ಎಂಟುಗಂಟೆ ಬಿಸಿಲು; ಮುಂದಿನ ಎಂಟು ಗಂಟೆ ಗುಡುಗು ಸಹಿತ ಹಿತಮಿತವಾದ ಮುಂಗಾರು ಮಳೆ ಹಾಗೂ ನಂತರದ ಎಂಟುಗಂಟೆ ಮೈಕೊರೆಯುವ ಚಳಿ ಇರಲಿದೆ. ಆದ್ದರಿಂದ ಪ್ರಾಣಿಗಳು ಮುಂಜಾಗ್ರತಾ ಕ್ರಮವಾಗಿ ಕೊಡೆ, ರೈನ್‌ಕೋಟ್, ಕಂಬಳಿಗಳನ್ನು ಸಜ್ಜಾಗಿಟ್ಟುಕೊಳ್ಳಲು ಹವಾಮಾನ ಇಲಾಖೆ ಎಚ್ಚರಿಸಿದೆ.

ಇಲ್ಲಿಗೆ ವಾರ್ತಾಪ್ರಸಾರ ಮುಕ್ತಾಯವಾಯಿತು. ಮುಂದಿನ ವಾರ್ತಾಪ್ರಸಾರ ಅಗತ್ಯಬಿದ್ದರೆ ಲಯನ್ ಚಾನಲ್‌ನಲ್ಲಿ ಮೂಡಿಬರಲಿದೆ.

ಅಸ್ಪಷ್ಟ, ಅನಿರ್ದಿಷ್ಟ, ಅಸಮರ್ಪಕ ವಾರ್ತೆಗಳಿಗಾಗಿ ನೋಡ್ತಾಯಿರಿ... ಪ್ರಾಣಿಲೋಕ!

ಪ್ರತಿಕ್ರಿಯಿಸಿ: **feedback@sudha.co.in**